**O.S. 231-17 DW-6**

**ಸತ್ಯ ಪ್ರತಿಜ್ಞೆ ಮೇರೆಗೆ ದಿನಾಂಕಃ 14.08.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ಶ್ರೀ G K D, ವಕೀಲರಿಂದಃ**

2. ಸಾಕ್ಷಿ ನುಡಿಯಲು ಯಾರು ಹೇಳಿಲ್ಲ. ವಕೀಲರು ಸಾಕ್ಷಿ ನುಡಿಯಲು ಹೇಳಿದ್ದರು. ಮುಖ್ಯ ವಿಚಾರಣೆಗೆ ವಕೀಲರು ಮಾಹಿತಿ ನೀಡಿದ್ದಾರೆ. ಮೃತ್ಯು ಪತ್ರಕ್ಕೆ ನಮ್ಮ ತಂದೆ ಸಹಿ ಮಾಡುವಾಗ ನಾನು ನೋಡಿಲ್ಲ. ನಾನು ಮೃತ್ಯು ಪತ್ರದಲ್ಲಿ ನಮ್ಮ ತಂದೆ ಸಹಿ ಇರುವುದನ್ನು ಕಣ್ಣಾರೆ ನೋಡಿಲ್ಲ. ನಾನು ನಮ್ಮ ತಂದೆ ಸಹಿಯನ್ನು ನೋಡಿ ನಮ್ಮ ತಂದೆ ಸಹಿ ಮಾಡಿದ್ದಾರೆಂದು ಹೇಳುತ್ತಿದ್ದೇನೆ. ಮೃತ್ಯು ಪತ್ರದ ಮೂಲ ದಾಖಲೆಯನ್ನು ತೋರಿಸಿದ ನಂತರ ನಾನು ಸಹಿ ನೋಡಿದ್ದೇನೆ. ಗಂಗಾಧರ ಅಂಗಡಿ ರವರು ನನಗೆ ಮೂಲ ಮೃತ್ಯು ಪತ್ರವನ್ನು ಒಂದು ವರ್ಷದ ಹಿಂದೆ ತೋರಿಸಿದರು. ಸಾಮಾನ್ಯವಾಗಿ ನಮ್ಮ ಮನೆಯಲ್ಲಿ ಇನ್ನೊಬ್ಬರ ಮನೆ ವಿಚಾರ ಮಾತನಾಡುವ ಪ್ರಸಂಗ ಬರುವುದಿಲ್ಲ ಅಂದರೆ ಸರಿ. ನಮ್ಮ ತಂದೆ 1983 ರಲ್ಲಿ ತಾನು ಸಾಕ್ಷಿದಾರನಾಗಿ ಸಹಿ ಮಾಡಿದ್ದೇನೆಂದು ನನ್ನ ಬಳಿ ಹೇಳಿದ್ದರು. ನಾನು 1974 ರಲ್ಲಿ ಜನಿಸಿದ್ದೇನೆ. 2017 ರಲ್ಲಿ ನನ್ನ ತಂದೆ ಮರಣ ಹೊಂದಿದ್ದಾರೆ. ಮೃತ್ಯು ಪತ್ರದಲ್ಲಿರುವ ವಿಷಯ ಗೊತ್ತಿಲ್ಲ. ದಿಃ 5.9.1983 ರಂದು ಬಸಪ್ಪ ಮೃತ್ಯು ಪತ್ರವನ್ನು ಬರೆದುಕೊಟ್ಟಿಲ್ಲ ನಮ್ಮ ತಂದೆ ಅದಕ್ಕೆ ಸಾಕ್ಷಿದಾರನೆಂದು ಸಹಿ ಮಾಡಿಲ್ಲ ಅಂದರೆ ಸರಿಯಲ್ಲ. ಸದರಿ ವಿಷಯವನ್ನು ನನ್ನ ಮುಂದೆ ಹೇಳಿದ್ದರು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಈ ದಾವೆಯನ್ನು ಯಾರು ಹಾಗೂ ಯಾರ ವಿರುದ್ಧ ಸಲ್ಲಿಸಿದ್ದಾರೆಂದು ಮಾಹಿತಿ ಇಲ್ಲ. ಯಾವ ಕಾರಣಕ್ಕೆ ದಾವೆ ಸಲ್ಲಿಸಿದ್ದಾರೆಂದು ಮಾಹಿತಿ ಇಲ್ಲ. ಬಸಪ್ಪ ಅಂಗಡಿ ರವರ ಮಕ್ಕಳಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೆ.ಸ.ಎ. ಒಪ್ಪಿಕೊಳ್ಳಲಾಯಿತು.

(ಯಮನಪ್ಪ ಕರೆಹನುಮಂತಪ್ಪ)
ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಜೆ ಎಂ ಎಫ್ ಸಿ, ಹುಬ್ಬಳ್ಳಿ.